ಪ್ರಥಮ ಬಾರಿಗೆ ಆಕೆ ಇವನನ್ನು ನೋಡಿ ತಾನಾಗಿಯೇ ಮೈ ಮುಟ್ಟಿ ಮಾತನಾಡಿಸಿದಾಗ ಆದಂತಹ ಗಾಬರಿ. ಒಳಗೆ ಹೋದ. ಚಾವಡಿಯ ಕಂಬಕ್ಕೊರಗಿ ಕುಳಿತಿದ್ದ ಆಕೆ. ಪೂರ್ತಿ ಬೆಳ್ಳಗಾದ ತಲೆಕೂದಲು. ನೆರಿಗೆ ಗಟ್ಟಿದ್ದ ಮುಖ. ಕಣ್ಣಲ್ಲಿ ಅದೇ ಹೊಳಪು ಇದ್ದರೂ ಸುತ್ತ ದಟ್ಟವಾಗಿದ್ದ ಕಪ್ಪು ಗೆರೆ. ಮುಚ್ಚಿಕೊಳ್ಳುವ ಅಗತ್ಯವೇ ಇಲ್ಲ ಎನ್ನುವಂತಿದ್ದ ಎದೆಯ ಮೇಲಿನಿಂದ ಜಾರುತ್ತಿದ್ದ ಸೆರಗು. ಇವನನ್ನು ನೋಡಿದ ಕೂಡಲೇ ಎದ್ದು ನಿಂತವಳು ಮುಂದೆ ಬಂದಳು. ನಡೆಯುವಾಗ ಮೈ ತೇಲುತ್ತಿತ್ತು. 'ಅಂತೂ ಬಂದೆಯಾ...' ದನಿಯಲ್ಲಿ ಅದೇ ಕಾಳಜಿ. ಅದೇ ತನಿ. ಎಂತಹ ಅದ್ಭುತ ನೆನಪಿನ ಶಕ್ತಿ! ಸುಮಾರು ನಲವತ್ತೈದು ವರ್ಷಗಳೇ ಕಳೆದಿದ್ದರೂ ಒಮ್ಮೆಗೇ ಗುರುತು ಹಿಡಿದು ಬಿಟ್ಟಳಲ್ಲ. ಮುಂದೆ ಬಂದ ಆಕೆ ಇವನನ್ನು ಹಿಡಿದುಕೊಳ್ಳಲು ಬಂದರೆ ತೆರೆದೇ ಇದ್ದ ಬಾಗಿಲ ಕಡೆ ನೋಡಿದ. 'ಕಳ್ಳ... ಇನ್ನೂ ಹೆದರಿಕೆ ಬಿಟ್ಟಿಲ್ಲ' ಎಂದು ಆಕೆ ಹೇಳಿದರೆ ಶುಷ್ಕ ನಗೆ ನಕ್ಕಿದ್ದ. ಅವಳ ನೆರೆತ ತಲೆ, ಸುಕ್ಕುಗಟ್ಟಿದ ಮುಖ ನೋಡಿದವನಲ್ಲಿ ನವಿರು ಭಾವನೆಗಳು ಹುಟ್ಟಲೇ ಇಲ್ಲ.

'ಕಾಫಿ ಮಾಡುತ್ತೇನೆ ಇರು' ಎಂದರೆ ಇವ ಗಡಿಬಿಡಿ ತೋರಿಸುತ್ತ, 'ಬೇಡ ಬೇಡ' ಎಂದು ಹೊರಡಲು ಅನುವಾದ. 'ಎಷ್ಟೊಂದು ದಿನಗಳ ಮೇಲೆ ಬಂದಿದ್ದೀಯ... ಊಟ ಮಾಡಿಕೊಂಡಾದರೂ ಹೋಗೋ...' ಗೋಗರೆಯುವಂತಿದ್ದ ಅವಳ ದನಿಯಲ್ಲಿ ನಿರಾಸೆ ಸ್ಪಷ್ಟವಾಗಿತ್ತು. ಆದರೂ ಕೇಳಿಸದವನಂತೆ ಹೊರಟೇ ಬಿಟ್ಟ.

ದಾರಿಯುದ್ದಕ್ಕೂ ಮನಸ್ಸಿನಲ್ಲಿ ಅದೇ. 'ಛೆ... ಇವಳಿಗಾಗಿಯೇ ಇಷ್ಟು ದಿನ ಕಾದದ್ದು... ಈ ನಿರಿಗೆ ಕಟ್ಟಿದ ಮುಖದ ಬಿಳಿ ಕೂದಲಿನ ಮುದುಕಿಗಾಗಿಯೇ...'

ತಿರುಗಿ ಹೋಗುವ ಟ್ರೈನಿಗೆ ಇನ್ನೂ ಸಮಯವಿತ್ತು. ಹೊಟ್ಟೆ ಹಸಿಯುತ್ತಿತ್ತು. ಈಗ ಚಿಕ್ಕದೊಂದು ಪಟ್ಟಣವೇ ಆಗಿದ್ದ ಒಂದು ಕಾಲದ ತನ್ನೂರಿನ ಆ ರಸ್ತೆಯ ಪಕ್ಕದಲ್ಲಿ ಹೊಸದರಂತೆ ಕಾಣಿಸುತ್ತಿದ್ದ ಒಂದು ಹೋಟೆಲಿಗೆ ನುಗ್ಗಿದ್ದ. ಹಸಿದ ಹೊಟ್ಟೆ ತುಂಬಿಸಿಕೊಳ್ಳುವ ಮುಂಚೆ ಕೈ ತೊಳೆಯುವ ಎಂದುಕೊಂಡು ನೀರಿನ ನಲ್ಲಿ ಇದ್ದಲ್ಲಿಗೆ ನಡೆದವನಿಗೆ ಕಾಣಿಸಿದ್ದು ನಲ್ಲಿಯ ಮೇಲ್ಗಡೆ ನಿಲ್ಲಿಸಿದ್ದ ಬೃಹತ್ ಕನ್ನಡಿಯಲ್ಲಿನ ತನ್ನ ಪ್ರತಿಬಿಂಬ. ಪೂರ್ಣವಾಗಿ ಬೋಳಾದ ತಲೆ. ಹಿಂದುಗಡೆ ತೀರಾ ಬೆಳ್ಳಗಾಗಿ ಲೆಕ್ಕ ಮಾಡಬಹುದಾದಷ್ಟೇ ಇದ್ದ ತಲೆಕೂದಲುಗಳು. ಜೋಲು ಬಿದ್ದ ಎರಡೂ ದವಡೆಯ ಮಾಂಸಖಂಡಗಳು, ನಿರಿಗೆ ನಿರಿಗೆಯಾಗಿದ್ದ ಕತ್ತಿನ ಚರ್ಮ, ತೀರಾ ಮುಂದೆ ಬಂದಿದ್ದ ಹೊಟ್ಟೆ. ಎಲ್ಲ ಅವನನ್ನು ಅಣಕಿಸಿದವು.

ಒಂದೇ ನಿಮಿಷ. ಕೈಯ್ಯನ್ನೂ ತೊಳೆದುಕೊಳ್ಳದೆ ಈಚೆ ಬಂದವ ಅದೇ ಹೋಟೆಲಿನಲ್ಲಿ ಒಂದಿಷ್ಟು ಸಿಹಿಯ ಜೊತೆ ಇಬ್ಬರಿಗೆ ಸಾಕಾಗುವಷ್ಟು ತಿಂಡಿಯನ್ನೂ ಕಟ್ಟಿಸಿಕೊಂಡು ಈಗಷ್ಟೇ ಬಾಗಿಲು ದಾಟಿ ಬಂದ ಆಕೆಯ ಮನೆಯತ್ತ ಮರಳಿ ಹೆಜ್ಜೆ ಹಾಕಲು ತೊಡಗಿದ.

**ಪಿ.ಪಿ. ಉಪಾಧ್ಯ**

ಭಾರತೀಯ ಜೀವ ವಿಮಾ ನಿಗಮದಲ್ಲಿ ಹಿರಿಯ ವಿಭಾಗಾಧಿಕಾರಿಯಾಗಿ ನಿವೃತ್ತರಾಗಿದ್ದಾರೆ. ಅವರ ಸುಮಾರು 100ಕ್ಕೂ ಹೆಚ್ಚು ಕತೆಗಳು ಪತ್ರಿಕೆಗಳಲ್ಲಿ ಅಚ್ಚಾಗಿವೆ. 'ಯಶೋದೆ' ಕಾದಂಬರಿ ಧಾರಾವಾಹಿಯಾಗಿ ಪ್ರಕಟಗೊಂಡಿದೆ. 'ಕಳೆದುಕೊಂಡಿದ್ದು ಮತ್ತು ಇತರ ಕತೆಗಳು' ಎಂಬ ಕಥಾ ಸಂಗ್ರಹ ಪ್ರಕಟವಾಗಿದೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.